ಇ) ಹಾಗಿದ್ದಲ್ಲಿ, ಆಕಾರಬಂದು ದುರಸ್ತಾಗಿ ಎಷ್ಟು ವರ್ಷಗಳಾಗಿದೆ ಈ ಬಗ್ಗೆ ತಾಲ್ಲೂಕು ಕಛೇರಿಗೆ ದಾಖಲೇ ಬಂದಿದೆಯೇ ಕಂದಾಯ ಲೆಕ್ಕ ದಾಖಲೆಗಳಲ್ಲಿ ಸರಕಾರಿ ಎಂತಲೆಲ್ಲ ಇದ್ದು ಭೂ ಮಾಲೀಕರಿಗೆ ಆಗಿರತಕ್ಕ ತೊಂದರೆಯು ಸರಕಾರದವರ ಗಮನಕ್ಕೆ ಬಂದಿದೆಯೇ ?

ಇ) ಭೂ ಮಾಲೀಕರಿಗೆ ತಹಶೀಲ್ದಾರ್ ಆಫೀಸಿನಲ್ಲಿ ಈವರೆಗೂ ದರಖಾಸ್ತು ಸೈಚ್ಛಿನ ನಂಬರು ಗಳಂತೆ ದಾಖಲೆ ಇದ್ದು ಆಕಾರ ಬಂದು ದುರಸ್ತಿನಂತೆ ಲೆಕ್ಕಾಧಿಕಾರಿ ದಾಖಲೆಗಳಲ್ಲಿ ನಮೂದಿಸಿರುವ ಭೂ ಮಾಲೀಕರಿಗೆ ಆಗಿರತಕ್ಕ ತೊಂದರೆಯನ್ನು ಬಗೆಹರಿಸಲಾಗುತ್ತದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಭೂರಹಿತರಿಗೆ ೧೯೫೯-೬೦ನೇ ಸಾಲಿನಲ್ಲಿ ಈಗ್ಗೆ ೨೬ ವರ್ಷಗಳ ಹಿಂದೆ ಸರಕಾರದಲ್ಲಿ ಭೂ ಮಂಜೂರಾತಿಯಾಗಿರುತ್ತದೆ.

ಆ) ಮಂಜೂರಾಗಿರುವುದಕ್ಕಿಂತ ಮುಂಚಿತವಾಗಿ ಸರ್ವೆ ಇಲಾಖೆಯವರು ವರವು ಕಾವಲಿನ ಜಮೀನನ್ನು ಅಳತೆ ಮಾಡಿ ಪೋಡುಗಳಾಗಿ ವಿಂಗಡಣೆ ಮಾಡಿರುತ್ತಾರೆ. ಪೋಡಿನಂತೆ ಮಂಜೂರಾದವರಿಗೆ ಸಾಗುವಳಿ ಚೀಟಿಯನ್ನು ಕೊಟ್ಟಿರುತ್ತಾರೆ.

ಇ) ಆಕಾರ ಬಂದು ದುರಸ್ತಾಗಿ ೨೬ ವರ್ಷಗಳಾಗಿರುತ್ತದೆ. ತಾಲ್ಲೂಕು ಕಛೇರಿಯಲ್ಲಿ ದಾಖಲೆ ಗಳಿರುತ್ತವೆ. ಮಂಜೂರಾದ ಜಮೀನಿನ ದುರಸ್ತಿ ಕಾರ್ಯವು ಮುಗಿದಿದ್ದು ಕೆಲವು ಪ್ರಕಟಣೆಗಳಲ್ಲಿ ದುರಸ್ತಿಯಾಗಿರುವಂತೆ ಕಂದಾಯ ದಾಖಲೆಗಳಲ್ಲಿ ನಮೂದಿಸಿದೆ. ಹಿಂದೆ ಬಿಟ್ಟು ಹೋಗಿರುವುದು ಗಮನಕ್ಕೆ ಬಂದಿರುತ್ತದೆ. ಈ ದುರಸ್ತಾದ ಎಲ್ಲಾ ಪ್ರಕಟಣೆಗಳನ್ನು ಸರ್ವೆ ಇಲಾಖೆಯವಲ್ಲಿರುವ ಆಕಾರ ಬಂದು ದಾಖಲಾತಿಗಳೊಂದಿಗೆ ತಾಳೆ ನೋಡಿ ಆರ್. ಆರ್. ದಾಖಲೆಗಳಲ್ಲಿ ನಮೂದು ಮಾಡಲು ತಹಶೀಲ್ದಾರ್‌ರವರಿಗೆ ನಿರ್ದೇಶನ ಕೊಟ್ಟಿದೆ.

ಈ) ತಾಲ್ಲೂಕು ಕಛೇರಿಯಲ್ಲಿರುವ ಆರ್. ಆರ್. ದಾಖಲೆಗಳಲ್ಲಿ ಮಂಜೂರಾದ ಎಲ್ಲಾ ಪ್ರಕರಣ ಗಳನ್ನು ದುರಸ್ತಿ ಮಾಡಿಕೊಂಡು ನಂತರ ಗ್ರಾಮ ಲೆಕ್ಕಾಧಿಕಾರಿಗಳಲ್ಲಿರುವ ದಾಖಲೆಗಳಲ್ಲಿ ನಮೂದಿಸ ಲಾಗುವುದು.

ಶ್ರೀ ಪೂರ್ಣಮಂತ್ತಪ್ಪ (ಮೊಳಕಾಲ್ಮೂರು).— ಅಧ್ಯಕ್ಷರೇ, ೧೯೫೯-೬೦ ರಲ್ಲಿ ಮಂಜೂರಾಗಿದೆ ಎಂದು ನಿಮಗೆ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ೧೯೪೧ ರಲ್ಲಿ ಬೋರ್ಡ್ ಆಗಿದೆ. ಆದರಲ್ಲಿ ಮಂಜೂರಾಗಿರುವ ಜಮೀನು. ಅಲ್ಲಿಂದ ೫೧ನೇ ಇಸವಿಯಲ್ಲಿ ಆಕಾರ ಬಂದು ದುರಸ್ತಾಗಿ ೨೬ ವರ್ಷಗಳಾಗಿರುತ್ತದೆ ಎಂದು ತಪ್ಪು ಮಾಹಿತಿಯನ್ನು ಕೊಟ್ಟಿರುತ್ತಾರೆ. ವೆರಿಫೈ ಮಾಡಿ ಸರಿಯಾದ ವ್ಯವಸ್ಥೆ ಮಾಡಿಸಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ತಪ್ಪಾಗಿದ್ದರೆ ಅದಷ್ಟು ಬೇಗ ಸರಿಪಡಿಸಲಿಕ್ಕೆ ಆಜ್ಞೆ ಕೊಡುತ್ತೇನೆ.

ಅಧ್ಯಕ್ಷರು. — ಶ್ರೀ ಎಸ್. ಜಿ. ನಂಜಯ್ಯನಮಠ್ ಗೈರುಹಾಜರಿ.

ಅಧ್ಯಕ್ಷರು.— ಶ್ರೀ ಆರ್. ನಾಯಕ್ ಗೈರುಹಾಜರಿ.

ಅಧ್ಯಕ್ಷರು.— ಶ್ರೀ ಬಿ. ಬಸವಲಿಂಗಪ್ಪ ಅವರ ಪ್ರಶ್ನೆಯನ್ನು ಮುಂದೂಡಲಾಗಿದೆ.

ಯಾದಗಿರಿ ತಾಲ್ಲೂಕಿನಲ್ಲಿರುವ ಗ್ರಾಮಗಳಿಗಾಗಿ ವಿದ್ಯುಚ್ಛಕ್ತಿ ಸೌಲಭ್ಯಗಳು

೧೩೦೨. ಶ್ರೀ ಮಲ್ಲಿಕಾರ್ಜುನ ಖಾರ್ಗೆ (ಗುರುಮಿಟ್ಕಲ್).— ಮಾನ್ಯ ವಿದ್ಯುಚ್ಛಕ್ತಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಯಾದಗಿರಿ ತಾಲ್ಲೂಕಿನಲ್ಲಿನ ವಿದ್ಯುದ್ದೀಕರಣವಾಗದೇ ಉಳಿದಿರುವ ಗ್ರಾಮಗಳ ಸಂಖ್ಯೆ ತಾಂಡ ಗಳು ವಸತ್ತು ಪಾಳ್ಯಗಳೂ ಸೇರಿ.

ಆ) ಮೇಲಿನ ಗ್ರಾಮಗಳಲ್ಲಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಲ್ಲಿ ಮಂಜೂರಾಗಿರುವ ಗ್ರಾಮಗಳು ಪಂತ್ತು ತಾಂಡಗಳ ಸಂಖ್ಯೆ ಎಷ್ಟು ಮತ್ತು ಕೆ. ಇ. ಬಿ. ಯು ಯಾವಾಗ ಈ ಕಾರ್ಯವನ್ನು ಪೂರ್ಣಗೊಳಿಸುತ್ತದೆ.

ಇ) ಗುರುಮಿತಕಲ್ ಕ್ಷೇತ್ರದಲ್ಲಿನ ಗ್ರಾಮಗಳ ವಿದ್ಯುದ್ದೀಕರಣವನ್ನು ಪೂರ್ಣಗೊಳಿಸಲು ಕೆ. ಇ. ಬಿ. ಯು ೧೯೮೪-೮೫, ೧೯೮೫-೮೬ ರಲ್ಲಿ ಹೊಂದಿದ್ದ ಗುರಿ ಏನು ?

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ೩೧-೧೨-೧೯೮೬ ರಂತೆ ಯಾದಗಿರಿ ತಾಲ್ಲೂಕಿನಲ್ಲಿ ವಿದ್ಯುದ್ದೀಕರಣವಾದ ಗ್ರಾಮಗಳು ತಾಂಡಗಳು :

೧) ಗ್ರಾಮಗಳು : ೨೦

೨) ಪಾಳ್ಯಗಳು : ೭೫ (೧೯೮೧ ರ ಜನಗಣತಿಯಂತೆ)

೩) ತಾಂಡಗಳು : ೪೭

ಆ) ಉಳಿದ ಎಲ್ಲಾ ೨೦ ಗ್ರಾಮಗಳು ಗ್ರಾಮೀಣ ವಿದ್ಯುದ್ದೀಕರಣ ನಿಗಮದ ಯೋಜನೆಯಲ್ಲಿ ಸೇರಿದೆ. ಆದರೆ ತಾಂಡಗಳು ಮಾತ್ರ ಇದರಲ್ಲಿ ಸೇರಿಲ್ಲ. ೩ ಗ್ರಾಮಗಳಿಗೆ ೧೯೮೫-೮೬ರ ಉಳಿದ ಅವಧಿಯಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮಾಡಲಾಗುವುದು ಮತ್ತು ಮಿಕ್ಕ ೧೭ ಗ್ರಾಮಗಳಿಗೆ ೧೯೮೬-೮೭ ಮತ್ತು ೧೯೮೭-೮೮ ರಲ್ಲಿ ವಿದ್ಯುತ್ ಒದಗಿಸುವ ಗುರಿ ಇದೆ. ಇವೆಹಲಿಯು ಗ್ರಾಮೀಣ ವಿದ್ಯುದ್ದೀಕರಣ ನಿಗಮವು ತಾಂಡಗಳಿಗೆ ಮಾತ್ರ ವಿದ್ಯುತ್ ಸರಬರಾಜು ಮಾಡಲು ಒಪ್ಪುವುದಿಲ್ಲ. ಇದನ್ನು ಗುಲ್ಬರ್ಗ ಜಿಲ್ಲೆಗೆ ಗ್ರಾಮೀಣ ವಿದ್ಯುದ್ದೀಕರಣ ನಿಗಮದ ಸಮಗ್ರ ಯೋಜನೆಯನ್ನು ರೂಪಿಸುವಾಗ ಪರಿಗಣಿಸಲಾಗುವುದು.

ಇ) ಗುರುಮಿತಕಲ್ ಕ್ಷೇತ್ರದಲ್ಲಿ ಒಟ್ಟು ೮೬ ಗ್ರಾಮಗಳಿದ್ದು ಅವುಗಳ ಪೈಕಿ ೬೨ ಗ್ರಾಮಗಳಿಗೆ ೩೧-೩-೧೯೮೪ ರಲ್ಲಿ ವಿದ್ಯುತ್ ಸರಬರಾಜು ಮಾಡಲಾಗಿದೆ. ಉಳಿದ ೨೪ ಗ್ರಾಮಗಳಿಗೆ ವಿದ್ಯುತ್ ಒದಗಿಸಲು ಗುರಿ ಈ ಕೆಳಕಂಡಂತೆ ಇದೆ.

ಕ್ರಮ ಸಂಖ್ಯೆ	ವರ್ಷ	ಗುರಿ	ಸಾಧನೆ
೧	೧೯೮೪-೮೫	೬	೬
೨	೧೯೮೫-೮೬	೯	೫ (ಡಿಸೆಂಬರ್ ೧೯೮೫ರ ವರೆಗೆ)
			ಉಳಿದ ೪ ಗ್ರಾಮಂಗಳನ್ನ ಮಾರ್ಚ್ ೧೯೮೬ರ ಒಳಗೆ ವಿದ್ಯುದ್ದೀಕರಣ ಮಾಡಲು ಉದ್ದೇಶಿಸಿದೆ.

ಉಳಿದ ೯ ಗ್ರಾಮಂಗಳಿಗೆ ೧೯೮೬-೮೭ ರಲ್ಲಿ ವಿದ್ಯುತ್ ಒದಗಿಸಂವ ಗುರಿ ಇದೆ.

ಶ್ರೀ ಎಂ. ವಂಲ್ಲಿಕಾರ್ಜುನಪ್ಪಾರ್ಗೆ.— ಅಧ್ಯಕ್ಷರೇ, ಆರ್. ಇ. ಪಿ. ಕೆಳಿಗೆ ಆ ತಾಲ್ಲೂಕಿನಲ್ಲಿ ಈಗ ಯಾವ ರೆವಿನ್ಯೂ ವಿಲೇಜಸ್ ಇವೆ ಅವುಗಳಿಗೆ ಮಾತ್ರ ಕಂಪ್ಲೀಟ್ ಮಾಡಲಾಗಿದೆ. ಮಾನ್ಯ ಮಂತ್ರಿಗಳು ಕೇವಲ ೨೪ ಮಾತ್ರ ಉಳಿದಿದೆ ಎಂದು ಹೇಳಿದ್ದಾರೆ ಆದರೆ ಇಲ್ಲಿ ರೆವಿನ್ಯೂ ವಿಲೇಜಸ್ ಇಷ್ಟು ಇವೆ ಅವುಗಳಿಗಿಂತಲೂ ಹೆಚ್ಚಿನ ಪಾಳ್ಯಗಳು ಹಾಗೂ ತಾಂಡಗಳು ಇವೆ. ಇವತ್ತು ಅಲ್ಲಿ ಅನೇಕ ತಾಂಡಗಳು ರೆವಿನ್ಯೂ ವಿಲೇಜಸ್‌ಗಿಂತಾ ದೊಡ್ಡವು ಇವೆ. ಇವತ್ತು ನಮ್ಮ ಯಾದ್ಗಿರ್ ತಾಲ್ಲೂಕಿನಲ್ಲಿನ ಜನಸಂಖ್ಯೆಯಲ್ಲಿ ಅರ್ಧದಷ್ಟು ಜನ ಇವತ್ತು ಪಾಳ್ಯ ಮತ್ತು ತಾಂಡಗಳಲ್ಲಿ ಇದ್ದಾರೆ. ಇವತ್ತು ಈ ಪಾಳ್ಯ ಮತ್ತು ತಾಂಡಗಳಿಗೆ ಸರ್ಕಾರ ಯಾವ ಕಾರ್ಯಕ್ರಮಗಳನ್ನು ಹಾಕಿದೆ ? ಆರ್. ಇ. ಪಿ. ಅಪ್ರೂವ್ ಮಾಡಿಲ್ಲ ಎಂದು ಹೇಳಬಹುದು ಇವತ್ತು ಒಂದು ಹಳ್ಳಿ ಪಕ್ಕದಲ್ಲಿ ಒಂದು ತಾಂಡ ಇರುತ್ತದೆ ಅಲ್ಲಿನ ತಾಂಡಗಳಿಗೆ ನಾವು ಹೋದಾಗ ನಾವೇನೂ ಮನುಷ್ಯರಲ್ಲವೇ ಎಂದು ಅಲ್ಲಿಜನ ನಮಗೆ ಕೇಳಂತ್ತಾರೆ. ಆರ್. ಇ. ಪಿ. ಸ್ಕೀಮ್ ಬಗ್ಗೆ ಯಾದ್ಗಿರ್‌ಗೆ ಸರ್ವೆ ಮಾಡಲವುದಕ್ಕೆ ಬಂದಿದ್ದ ತಂಡ ಬಂದಿದ್ದಾಗ ಈ ತಾಂಡ ಹಾಗೂ ಪಾಳ್ಯಗಳನ್ನೂ ಸೇರಿಸಬೇಕೆಂದು ನಾನು ಹೇಳಿದ್ದೆ. ಈ ಬಗ್ಗೆ ನಾನು ಆಗ ಚೀಫ್ ಇಂಜಿನಿಯರ್‌ಗೂ ಸಹಾ ಹೇಳಿದ್ದೇನೆ. ಆದರೆ ಇದುವರೆವಿಗೂ ಅವುಗಳ ಬಗ್ಗೆ ಏನೂ ಯೋಜನೆ ಮಾಡಿಲ್ಲ, ಇದಕ್ಕೆ

ಆರ್. ಇ. ಸಿ. ಯವರು ಒಪ್ಪಿಲ್ಲವೆಂದರೆ ನಮ್ಮ ರಾಜ್ಯ ಸರ್ಕಾರದವರೇ ಹಣವನ್ನು ಒದಗಿಸಿ ಈ ಜಾಗ ಗಳಿಗೆ ವಿದ್ಯುತ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತದೆಯೇ ?

ಶ್ರೀ ಜೆ. ಎಸ್. ದೇಶ್‌ಮುಖ್.— ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮ್ಮ ಪಾರ್ಟಿಯವರು ಹೇಳಿದಹಾಗೆ ಕೆಲವೊಂದು ಗ್ರಾಮಗಳಿಗೆ ವಿದ್ಯುದೀಕರಣವನ್ನು ಮಾಡಲಾಗಿದೆ. ಇನ್ನು ಕೆಲವೊಂದು ಗ್ರಾಮಗಳಿಗೆ ಏನೂ ಸರ್ವೀಸ್ ಆಗಿಲ್ಲವೆಂದು ಲಿಸ್ಟ್ ಕೊಟ್ಟರು. ಆದರ ಬಗ್ಗೆ ಒನೇ ಪಂಚವಾರ್ಷಿಕ ಯೋಜನೆಯಲ್ಲಿ ಮಂಗಿಸುತ್ತೇವೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಅಧ್ಯಕ್ಷರೇ, ಒನೇ ಯೋಜನೆ ಎಂದರೆ ೫ ವರ್ಷಗಳಲ್ಲಿ ಮಾಡುತ್ತೀರಾ ? ಇವತ್ತು ನೀವು ಎರಡು ರೀತಿಯಲ್ಲಿ ಮಾಡಬಹುದು. ನಿಮ್ಮ ಆರ್. ಇ. ಸಿ. ಪ್ರೋಗ್ರಾಮ್ ಪ್ರಕಾರ ಕೆಲವು ಹಳ್ಳಿಗಳನ್ನು ತಾವು ತೆಗೆದುಕೊಳ್ಳಬಹುದು. ಹಾಗೂ ಎಲ್ಲೆಲ್ಲಿ ಹ್ಯಾಮ್ಲೆಟ್ಸ್ ಮತ್ತು ತಾಂಡಗಳು ಆರ್. ಇ. ಸಿ. ನಲ್ಲಿ ಇನ್‌ಕ್ಲೂಡ್ ಆಗಿಲ್ಲ ಅವಕ್ಕೆ ಸರ್ಕಾರದ ವತಿಯಿಂದಲೇ ಮಾಡಿದರೆ ಅಲ್ಲಿಯ ಜನರಿಗೆ ಸಹಾಯವಾಗುತ್ತದೆ. ಇವತ್ತು ಅರ್ಧ ಊರಿಗೆ ಬೆಳಕು. ಅರ್ಧ ಊರಿಗೆ ಕತ್ತಲನ್ನು ಕೊಟ್ಟಿದ್ದೀರಿ. ಇವತ್ತು ತಾಂಡದಲ್ಲಿರುವ, ಹಾಂಲೆಟ್‌ನಲ್ಲಿ ಇರುವ ಜನರೆಲ್ಲಾ ಬಡವರೇ ಆಗಿದ್ದಾರೆ. ಅಲ್ಲಿಗೂ ತಾವು ವಿದ್ಯುದೀಕರಣ ಮಾಡುವುದಕ್ಕೆ ಕಾರ್ಯಕ್ರಮವನ್ನು ಅದಷ್ಟಂ ಬೇಗ ತೆಗೆದುಕೊಳ್ಳುತ್ತೀರಾ ? ಇವತ್ತು ನಿಮ್ಮಲ್ಲಿ ಈ ಬಗ್ಗೆ ಫಂಡ್ಸ್ ಇದೆ. ಅನೇಕ ಹಳ್ಳಿಗಳಲ್ಲಿ ತಾವೇ ಡಿಸಿಷನ್ ತೆಗೆದುಕೊಂಡು ಎಲೆಕ್ಟ್ರಿಫಿಕೇಷನ್ ಮಾಡಿದ್ದೀರಿ. ಸರ್ಕಾರ ಸ್ವಂತ ಹಣ ಕೊಟ್ಟು ಕೆಲವು ಕಡೆ ವಿದ್ಯುದೀಕರಣ ಮಾಡಿದೆ. ಈ ರೀತಿ ಈ ಹಳ್ಳಿಗಳಲ್ಲೂ ಮಾಡುವುದಕ್ಕೆ ಏನು ತೊಂದರೆ ತವಂಗೆ ಇದೆ. ಈ ಬಗ್ಗೆ ನಿಧಾನವಾಗಿ ವಿವರ ತರಿಸಿಕೊಂಡು ಹೇಳಿ. ಆತುರ ಬೇಡ.

ಅಧ್ಯಕ್ಷರು.— ಅವರ ಪಕ್ಕದಲ್ಲೇ [ಹೋಗಿ ಏಕೆ ಕೇಳಬಾರದು ? ಆ ತಾಲ್ಲೂಕಿನ ಎಲ್ಲಾ ಮಾಹಿತಿ ತವಂಗೆ ಸಿಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ. — ಅಲ್ಲಿ ಏನು ಸಿಗುತ್ತದೆ ಸ್ವಾಮಿ ? ಈ ತಾಲ್ಲೂಕಿನಲ್ಲಿ ಎಷ್ಟು ಗ್ರಾಮ ಇದೆ. ತಾಂಡ ಇದೆ ಪಾಳ್ಯ ಇದೆ ಎಂಬುದು ಹಾಗೂ ಎಷ್ಟು ಹಳ್ಳಿಗಳಿಗೆ ವಿದ್ಯುದೀಕರಣ ಆಗಿದೆ ಎಂದು ತಿಳಿಯುತ್ತದೆ. ಹಣದ ಬಗ್ಗೆ, ಕೆಲಸಕಾರ್ಯಗಳನ್ನು ಹಾಕಿಕೊಳ್ಳುವ ಬಗ್ಗೆ ನಾವು ಇಲ್ಲೇ ಕೇಳಬೇಕು. ಅಲ್ಲಿಗೆ ವೈರ್ ಇಲ್ಲಿಂದ ಹೋಗಬೇಕು. ಎಲ್ಲಾ ವಿಷಯ ಇಲ್ಲಿಂದಲೇ ಹೋಗಬೇಕೇಕು, ಅಲ್ಲಿಯ ಎ. ಇ. ಇ. ಕೈಯಲ್ಲಿ ಏನೂ ಇಲ್ಲ.

ಶ್ರೀ ಜೆ. ಎಸ್. ದೇಶ್‌ಮುಖ್.— ಅಧ್ಯಕ್ಷರೇ, ಗುರುಮಿಂಟ್‌ಕಲ್ ಕ್ಷೇತ್ರದಲ್ಲಿ ಒಟ್ಟು ೮೬ ಗ್ರಾಮಗಳಿದ್ದು ಅವುಗಳ ಪೈಕಿ ೬೨ ಗ್ರಾಮಗಳಿಗೆ ೩೧-೩-೧೯೮೪ ರಲ್ಲಿ ವಿದ್ಯುತ್ ಸರಬರಾಜು ಮಾಡ ಲಾಗಿದೆ. ೧೯೮೪-೮೫ ರಲ್ಲಿ ಗುರಿ ೬ ಇದ್ದು ಸಾಧನೆ ೬ ಆಗಿರುತ್ತದೆ. ಹಾಗೂ ೧೯೮೫-೮೬ ರಲ್ಲಿ ಗುರಿ ೯ ಇದ್ದು ಡಿಸೆಂಬರ್ ೧೯೮೫ ರವರೆಗೆ ೫ ಗ್ರಾಮಗಳ ಸಾಧನೆ ಆಗಿದೆ. ಉಳಿದ ೪ ಗ್ರಾಮಗಳನ್ನು ಮಾರ್ಚ್ ೧೯೮೬ರ ಒಳಗೆ ವಿದ್ಯುದ್ದೀಕರಣ ಮಾಡಲು ಉದ್ದೇಶಿಸಿದೆ. ಉಳಿದ ೯ ಗ್ರಾಮಗಳಿಗೆ ೧೯೮೬-೮೭ರಲ್ಲಿ ವಿದ್ಯುತ್ ಒದಗಿಸುವ ಗುರಿ ಇದೆ. ಇದನ್ನೂ ತಾಂಡಗಳ ಬಗ್ಗೆ ಸ್ಪೆಷಲ್ ಕಾಂಪೊನೆಂಟ್ ಪ್ರೋಗ್ರಾಮ್ ನಲ್ಲಿ ತೆಗೆದುಕೊಂಡು ೧೯೮೬ ರಲ್ಲಿ ಸಂಪೂರ್ಣವಾಗಿ ಮಂಗಿಸುತ್ತೇವೆಂದು ಹೇಳುತ್ತೇನೆ.

ಹೊಸದುರ್ಗ ತಾಲ್ಲೂಕಿನ ಕಂಚೀಪುರ ಗ್ರಾಮದ ಸರ್ವೆ ನಂ. ೧೨೨ರ ಜಮೀನಿನ ಅಳತೆ ಬಗ್ಗೆ.

೧೭೮೪. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ), ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).— ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊಸದುರ್ಗ ತಾಲ್ಲೂಕಿನ ಕಂಚೀಪುರ ಗ್ರಾಮದ ಸರ್ವೆ ನಂ. ೧೨೨ರ ಜಮೀನನ್ನು ೧೫ ವರ್ಷಗಳಿಂದ ಸಮೀಕ್ಷೆ ಮಾಡಿ ಅಳತೆ ಮಾಡದಿರುವುದು ಸರ್ಕಾರದವರಿಗೆ ಗೊತ್ತಿದೆಯೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರಂ ತ್ವರಿತ ಕ್ರಮ ತೆಗೆದುಕೊಳ್ಳುವರೆ ?